# ಶಾಲೆಯ ಪಠ್ಯಕ್ರಮದಲ್ಲಿ ಇರಬೇಕಾದ ಮುಖ್ಯಾಂಶಗಳು

[ "ಚಾರಿತ್ರ್ಯವನ್ನು ರೂಪಿಸುವಂತಹ, ಬುದ್ಧಿವೈಶಾಲ್ಯವನ್ನು ನೀಡುವಂತಹ, ಮನಶ್ಶಕ್ತಿಯನ್ನು ವೃದ್ಧಿಸುವಂತಹ ಮತ್ತು ವ್ಯಕ್ತಿಯು ತನ್ನ ಕಾಲಮೇಲೆ ತಾನು ನಿಲ್ಲಲು ಸಹಾಯಕವಾಗುವಂತಹ ಶಿಕ್ಷಣ ನಮಗೆ ಬೇಕು" ಎನ್ನುತ್ತಾರೆ ಸ್ವಾಮಿ ವಿವೇಕಾನಂದರು. ಶಿಕ್ಷಣದಿಂದ ಸಮಗ್ರ ವ್ಯಕ್ತಿತ್ವದ ಬೆಳವಣಿಗೆಯಾಗಬೇಕು ಎಂಬುದು ಸ್ವಾಮಿ ವಿವೇಕಾನಂದರ ಅಭಿಪ್ರಾಯ. ಈಗಿನ ತಾಂತ್ರಿಕ ಯುಗದಲ್ಲಿ ಕೇವಲ ತಂತ್ರಜ್ಞರನ್ನು ತಯಾರಿಸುವುದೇ ಶಿಕ್ಷಣದ ಗುರಿಯಾಗಿದೆ. ಅಂದರೆ ವ್ಯಕ್ತಿಯನ್ನು ಕೇವಲ ಒಂದು ಉಪಕರಣವಾಗಿ ಬಳಸಲಾಗುತ್ತದೆ. ಆದರೆ ಪ್ರಜ್ಞಾಪೂರ್ಣ ವ್ಯಕ್ತಿಯನ್ನು ಕೇವಲ ಉಪಕರಣವಾಗಿ ಬಳಸಲಾಗುವುದಿಲ್ಲ. ಅವನಲ್ಲಿ ತನ್ನತನವಿರುತ್ತದೆ. ಅವನಲ್ಲಿ ವೈಯಕ್ತಿಕ ಪರಿವರ್ತನೆ ಉಂಟಾಗದಿದ್ದರೆ, ಅವನಲ್ಲಿರುವ ತನ್ನತನ ವಿನಾಶಕಾರಿಯಾಗುತ್ತದೆ. ಆದ್ದರಿಂದ ವ್ಯಕ್ತಿಯ ಸಮಗ್ರ ಬೆಳವಣಿಗೆ ಶಿಕ್ಷಣದ ಗುರಿಯಾಗಬೇಕು, ಕೇವಲ ಕುಶಲ ಕರ್ಮಿಗಳನ್ನು ನಿರ್ಮಿಸುವುದಲ್ಲ. ಈ ಹಿನ್ನೆಲೆಯಲ್ಲಿ NCERT (National Council for Education and Research Training) ತನ್ನ ಒಂದು ವರದಿಯಲ್ಲಿ ಶಿಕ್ಷಣಕ್ರಮದಲ್ಲಿ ಇರಬೇಕಾದ ಮುಖ್ಯಾಂಶಗಳನ್ನು ಪ್ರಸ್ತುತಪಡಿಸಿದೆ. ಅವು ಈ ಕೆಳಗಿನಂತಿವೆ.]

1) ಕೇಳುವ, ನುಡಿಯುವ, ಓದುವ, ಬರೆಯುವ, ಆಲೋಚಿಸುವ ಮತ್ತು ಸಂವಾದಿಸುವ ಭಾಷಾಸಾಮರ್ಥ್ಯವನ್ನು ಬೆಳಸುವುದು. ಇದು ಸಾಮಾಜಿಕ ಜೀವನಕ್ಕೂ ದೈನಂದಿನ ಜೀವನದಲ್ಲಿ ಸಕ್ರಿಯವಾಗಿ ಭಾಗವಹಿಸುವುದಕ್ಕೂ ಆವಶ್ಯಕ.

2) ತಾರ್ಕಿಕ ಮನಸ್ಸನ್ನು ಬೆಳಸಲು ಅಂಕಗಣಿತದ ಪ್ರಾವೀಣ್ಯ ಆವಶ್ಯಕ. ಅಂಕಗಣಿತೀಯವಾಗಿ ಕಾರ್ಯನಿರ್ವಹಣೆ ಮಾಡಲು ಮತ್ತು ಅದನ್ನು ಜೀವನದಲ್ಲಿ ಅಳವಡಿಸಿಕೊಳ್ಳಲು ಇದು ಸಹಾಯಕವಾಗುತ್ತದೆ.

3) ವೈಚಾರಿಕ ಮನೋಭಾವ, ಸಮಸ್ಯಾಪರಿಹಾರ, ಪ್ರಶ್ನಿಸುವ ಧೈರ್ಯ ಮತ್ತು ವಾಸ್ತವಿಕ ದೃಷ್ಟಿಕೋನ—ಇವುಗಳನ್ನೊಳಗೊಂಡ ವೈಜ್ಞಾನಿಕ ಧೋರಣೆಯನ್ನು ಬೆಳೆಸುವುದು. ಇದರಿಂದ ರಹಸ್ಯಾತ್ಮಕತೆ, ಮೂಢನಂಬಿಕೆಗಳು ಮತ್ತು ಅದೃಷ್ಟವಾದ ಮುಂತಾದುವುಗಳನ್ನು ಹೋಗಲಾಡಿಸಿ, ಭಾರತೀಯ ಸಂಪ್ರದಾಯದಲ್ಲಿ ಹುದುಗಿರುವ ಜ್ಞಾನ ಭಂಡಾರವನ್ನು ಹೊರತೆಗೆಯುವಂತಾಗುತ್ತದೆ.

4) ಪ್ರಾಕೃತಿಕ ಮತ್ತು ಸಾಮಾಜಿಕ ವಾತಾವರಣವನ್ನು ಪೂರ್ಣ ದೃಷ್ಟಿಯಿಂದ ಅರ್ಥಮಾಡಿಕೊಳ್ಳುವುದು. ಅವುಗಳ ನಡುವೆ ಇರುವ ಪರಸ್ಪರ ಪ್ರತಿಕ್ರಿಯೆಯನ್ನೂ ವಾತಾವರಣಕ್ಕೆ ಸಂಬಂಧಿಸಿದ ಸಮಸ್ಯೆಗಳನ್ನೂ ಅವುಗಳನ್ನು ಸಂರಕ್ಷಿಸುವ ಕಾರ್ಯವಿಧಾನಗಳನ್ನೂ ಅರ್ಥಮಾಡಿಕೊಳ್ಳುವುದು.

5) ವಿವಿಧ ಪ್ರದೇಶಗಳ ಮತ್ತು ದೇಶದ ವಿವಿಧ ಭಾಗಗಳಲ್ಲಿ ವಾಸಿಸುವ ಜನರ ವೈವಿಧ್ಯವನ್ನೂ ದೇಶದ ಸಾಂಸ್ಕೃತಿಕ ವೈವಿಧ್ಯವನ್ನೂ ಅರ್ಥಮಾಡಿಕೊಳ್ಳುವುದು.

6) ಗ್ರಾಮೀಣ, ಪರಿಶಿಷ್ಟ ಮತ್ತು ದುರ್ಬಲ ವರ್ಗಗಳಿಂದ ಬಂದ ಸ್ವಾತಂತ್ರ್ಯ ಹೋರಾಟಗಾರರ ಮತ್ತು ಸಾಮಾಜಿಕ ಕಾರ್ಯಕರ್ತರ ಬಲಿದಾನ ಮತ್ತು ಕೊಡುಗೆಯನ್ನು ಮೆಚ್ಚಿ, ಅವರ ಆದರ್ಶವನ್ನು ಅನುಸರಿಸುವ ಮನೋಭಾವವನ್ನು ಬೆಳಸಿಕೊಳ್ಳುವುದು.

7) ನಿರಂತರ ಬದಲಾಗುವ ತಾಂತ್ರಿಕತೆ ಮತ್ತು ದೇಶದ ಸನಾತನ ಸಂಸ್ಕೃತಿ—ಇವೆರಡನ್ನೂ ಸಮನ್ವಯಗೊಳಿಸಿ ಸಮತೂಕದಲ್ಲಿ ಎರಡನ್ನೂ ಉಳಿಸಿಕೊಳ್ಳುವ ಆವಶ್ಯಕತೆಯನ್ನು ಮನಗಾಣುವುದು.

8) ರಾಷ್ಟ್ರೀಯ ಸಂಕೇತಗಳ ಜ್ಞಾನವನ್ನು ಪಡೆಯುವುದು ಮತ್ತು ಅವುಗಳನ್ನು ಗೌರವಿಸುವುದು, ಹಾಗೂ ರಾಷ್ಟ್ರೀಯತೆಯನ್ನೂ ಅದರ ಏಕತೆಯನ್ನೂ ಉಳಿಸಿಕೊಳ್ಳುವ ದೃಢ ಸಂಕಲ್ಪ.

9) ವಸುಧೈವ ಕುಟುಂಬಕಮ್—ಈ ಆದರ್ಶದಿಂದ ಹದಗೊಳಿಸಲ್ಪಟ್ಟ ದೇಶಭಕ್ತಿ ಮತ್ತು ರಾಷ್ಟ್ರಪ್ರಜ್ಞೆಯನ್ನು ಬೆಳಸಿಕೊಳ್ಳುವುದು.

10) ಜಾಗತೀಕರಣ, ಉದಾರೀಕರಣ ಮತ್ತು ಸ್ಥಳೀಯೀಕರಣ—ಇವುಗಳ, ರಾಷ್ಟ್ರೀಯ ಮಟ್ಟದಲ್ಲಿ, ವಿಧಾಯಕ ಮತ್ತು ನಿಷೇಧಾತ್ಮಕ ಪರಿಣಾಮವನ್ನು ಅರ್ಥಮಾಡಿಕೊಳ್ಳುವುದು.

11) ವ್ಯಕ್ತಿಯನ್ನು ಮಾನವೀಯಗೊಳಿಸುವ, ಸಾಮಾಜಿಕವಾಗಿ ಪರಿಣಾಮಕಾರಿಯನ್ನಾಗಿ ಮಾಡುವ, ಜೀವನಕ್ಕೆ ಅರ್ಥ ಮತ್ತು ನಿರ್ದೇಶನವನ್ನು ನೀಡುವ ವೈಯಕ್ತಿಕ, ಸಾಮಾಜಿಕ, ನೈತಿಕ, ರಾಷ್ಟ್ರೀಯ ಮತ್ತು ಆಧ್ಯಾತ್ಮಿಕ ಮೌಲ್ಯಗಳನ್ನು ಬೆಳಸಿಕೊಳ್ಳುವುದು.

12) ಭೂಮಿ, ನೀರು, ಗಾಳಿ, ಅಗ್ನಿ, ಮತ್ತು ಆಕಾಶ (ಪಂಚಭೂತ) ಇವುಗಳೊಡನೆ ಪೂರ್ಣ ಹೊಂದಾಣಿಕೆಯಿಂದ ಬಾಳುತ್ತ, ಭೌತಿಕವಾಗಿಯೂ ಮತ್ತು ಮಾನಸಿಕವಾಗಿಯೂ ಸಮರ್ಥ ಜೀವನವನ್ನು ನಡೆಸುವ ಜ್ಞಾನವನ್ನೂ ಧೋರಣೆಯನ್ನೂ ಸ್ವಭಾವವನ್ನೂ ಬೆಳಸಿಕೊಳ್ಳುವುದು.

13) ಒಂದು ಕಲಿಕೆಯ ಸಮಾಜವನ್ನು ನಿರ್ಮಿಸುವ ಸಲುವಾಗಿ ಸ್ವಶಿಕ್ಷಣ, ಸ್ವನಿರ್ದೇಶಿತ ಶಿಕ್ಷಣ ಮತ್ತು ಜೀವನಪೂರ್ತಿ ಶಿಕ್ಷಣ ಇವುಗಳಿಗೆ ಆವಶ್ಯಕವಾದ ಗುಣಗಳನ್ನೂ ಲಕ್ಷಣಗಳನ್ನೂ ಬೆಳಸಿಕೊಳ್ಳುವುದು.

14) ಮಾಹಿತಿಗಳನ್ನು ಸಂಸ್ಕರಿಸುವುದು ಮಾತ್ರವಲ್ಲದೆ ಅವುಗಳನ್ನು ಕುರಿತು ಮನನ ಮಾಡುತ್ತ ರಕ್ತಗತ ಮಾಡಿಕೊಂಡು ಒಳದೃಷ್ಟಿಯನ್ನು ಬೆಳಸಿಕೊಳ್ಳುವ ಸಾಮರ್ಥ್ಯವನ್ನು ಪಡೆಯುವುದು.

15) ಕಷ್ಟಪಟ್ಟು ಕೆಲಸ ಮಾಡುವ ಇಚ್ಛೆಯನ್ನೂ ಉದ್ಯಮ ಕೌಶಲವನ್ನೂ ದೈಹಿಕ ಪರಿಶ್ರಮದ ಘನತೆಯನ್ನೂ ಬೆಳಸಿಕೊಳ್ಳುವುದು. ಇದು ಉತ್ಪಾದನೆಯನ್ನು ಹೆಚ್ಚಿಸುವುದಕ್ಕೂ ಉದ್ಯೋಗ ಸಂತೃಪ್ತಿಯನ್ನು ಪಡೆಯುವುದಕ್ಕೂ ಸಂಪತ್ತನ್ನು ಹುಟ್ಟಿಸುವ ವ್ಯವಸ್ಥೆಯನ್ನು ನಿರ್ಮಿಸುವುದಕ್ಕೂ ಅತ್ಯಾವಶ್ಯಕ.

16) ಔದ್ಯೋಗಿಕ ಅಥವಾ ಪೂರ್ವ ಔದ್ಯೋಗಿಕ ಕುಶಲತೆಗಳನ್ನು ಬೆಳಸಿಕೊಳ್ಳುವುದು.

17) ಬೃಹತ್ ಕುಟುಂಬಗಳ ವಿವಿಧ ಪರಿಣಾಮಗಳನ್ನೂ ಜನಸಂಖ್ಯಾ ನಿಯಂತ್ರಣದ ಆವಶ್ಯಕತೆಯನ್ನೂ ಅರ್ಥಮಾಡಿಕೊಳ್ಳುವುದು.

18) ಲೈಂಗಿಕ ವಿಷಯಕ್ಕೆ ಸಂಬಂಧಿಸಿದಂತೆ ಆರೋಗ್ಯಕರ ಧೋರಣೆಯನ್ನು ಬೆಳೆಸಿಕೊಳ್ಳುವುದು ಮತ್ತು ಸ್ತ್ರೀ-ಪುರುಷರಲ್ಲಿ ಪರಸ್ಪರ ಗೌರವ ಭಾವವನ್ನು ಬೆಳಸಿಕೊಳ್ಳುವುದು.

(**ಕೃಪೆ:** *National Curriculum Framework for School Education*, NCERT)